(ಸಾಕ್ಷಿಯನ್ನು ದಿನಾಂಕ 17-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ. ಜಿ. ಟಿ.ಯವರಿಂದಃ**

ನನಗೆ ಪ್ರಕರಣದ ಸಂಪೂರ್ಣ ಮಾಹಿತಿ ಇದೆ. ಆರೋಪಿಗೆ ಸಾಲ ಮಂಜೂರು ಮಾಡುವ ಕಾಲಕ್ಕೆ ನಾನು ಮ್ಯಾನೇಜರ್ ಆಗಿರಲಿಲ್ಲ. ನಾನು ಕಡತಗಳನ್ನು ನೋಡಿ ಸಾಕ್ಷಿ ನುಡಿದಿರುತ್ತೇನೆ. ಈ ಪ್ರಕರಣವನ್ನು 4 ಜನರ ಸಾಲಕ್ಕೆ ಸಂಬಂಧಪಟ್ಟಂತೆ ದಾಖಲು ಮಾಡಲಾಗಿರುತ್ತದೆ. ಸದರಿ ನಾಲ್ಕೂ ಸಾಲಗಳು ಪ್ರತ್ಯೇಕ ಸಾಲಗಳಾಗಿರುತ್ತವೆ. ಸಾಲ ಪಡೆದುಕೊಂಡವರ ವಿವರಗಳು ಮತ್ತು ಸಾಲದ ವಿವರಗಳ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾಲ್ಕೂ ಸಾಲಗಳು ಸೇರಿ ರೂ.3,65,000-00 ಒಟ್ಟೂ ಸಾಲದ ಮೊತ್ತ. ನಾಲ್ಕೂ ಸಾಲಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ. ಆದರೆ ನಾಲ್ಕೂ ಸಾಲಗಳಿಗೆ ಸಂಬಂಧಪಟ್ಟಂತೆ ಆರೋಪಿ ಒಂದೇ ಚೆಕ್‌ನ್ನು ನೀಡಿದ್ದರಿಂದ ಈ ಒಂದೇ ಪ್ರಕರಣವನ್ನು ದಾಖಲು ಮಾಡಿದ್ದೇನೆ. ಸಾಲಗಾರರಿಗೆ ಕೊನೆಯದಾಗಿ ನೋಟೀಸು ಯಾವಾಗ ನೀಡಲಾಗಿದೆ ನೆನಪಿಲ್ಲ. ಸದರಿ ನೋಟೀಸಿನಲ್ಲಿ ಎಷ್ಟು ಅಸಲು ಮತ್ತು ಎಷ್ಟು ಬಡ್ಡಿ ಎಂಬ ಬಗ್ಗೆ ನೆನಪಿಲ್ಲ. ಮಹ್ಮದ್ ಅಲಿ ಸಾಹೇಬರವರಿಗೆ



ರೂ.1,00,000-00, ಹುಸೇನ್ ಅಬ್ದುಲ್ ರೆಹಮಾನ್ ರವರಿಗೆ ರೂ.80,000-00, ಆರಿಫ್ ಫಕೀರ್ ಸಾಬ್ ರವರಿಗೆ ರೂ.1,00,000-00 ಸಾಲ ನೀಡಲಾಗಿರುತ್ತದೆ. ಆರೋಪಿಯೂ ಸಹ ಸ್ವತಃ ರೂ.1,00,000-00 ಸಾಲ ಪಡೆದುಕೊಂಡಿರುತ್ತಾರೆ. ಮಹ್ಮದ್ ಅಲಿ ಸಾಹೇಬ ಮತ್ತು ಹುಸೇನ್ ಅಬ್ದುಲ್ ರೆಹಮಾನ್ ರವರ ಸಾಲಕ್ಕೆ ಆರೋಪಿಯೇ ಜಾಮೀನುದಾರ. ಆರಿಫ್ ಫಕೀರ್ ಸಾಬ್ ರವರಿಗೆ ಯಾರು ಜಾಮೀನುದಾರರು ನೆನಪಿಲ್ಲ. ಯಾರದ್ದೋ ಸಾಲಕ್ಕೆ ಯಾರದ್ದೋ ಚೆಕ್ಕನ್ನು ಸೊಸೈಟಿಯಲ್ಲಿ ಪಡೆದುಕೊಳ್ಳುವ ಹಾಗಿಲ್ಲ. ಆದರೆ ಆರಿಫ್ ಸಾಬರವರು ಆರೋಪಿಯ ಅಣ್ಣನ ಮಗನಾಗಿರುವುದರಿಂದ ಆತನ ಸಾಲದ ತಿರುವಳಿಗೆ ಸೇರಿ ಈ ಚೆಕ್‌ನ್ನು ನೀಡಿರುತ್ತಾರೆ. ಆರಿಫ್ ಸಾಬ ರವರ ಸಾಲದ ಅರ್ಜಿಯ ಮೇಲೆ ಆಗಲೀ ಅಥವಾ ಆತನ ಇತರೇ ಸಾಲದ ದಾಖಲೆಗಳ ಮೇಲೆ ಆರೋಪಿ ಸಹಿ ಮಾಡಿರುವುದಿಲ್ಲ. ಆರಿಫ್ ಸಾಬರವರ ಸಾಲದ ಭದ್ರತೆಗೆ ಏನೆಲ್ಲ ದಾಖಲೆಗಳನ್ನು ಪಡೆದುಕೊಳ್ಳಲಾಗಿದೆ ನನಗೆ ನೆನಪಿಲ್ಲ, ಫೈಲ್ ನೋಡಿ ಹೇಳಬೇಕು. ಮಹ್ಮದ್‌ಅಲಿ ಸಾಬ್ ಮತ್ತು ಹುಸೇನ್ ರೆಹಮಾನರವರ ಸಾಲದ ಅಸಲು ಮತ್ತು ಬಡ್ಡಿ ಒಟ್ಟೂ ಎಷ್ಟು ಮೊತ್ತ ಬಾಕಿ ಇತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಮೂರೂ ಸಾಲಗಳನ್ನು 2019 ರಲ್ಲಿ ಮತ್ತು ಆರಿಫ್ ರವರಿಗೆ 2020 ರಲ್ಲಿ ಸಾಲವನ್ನು ಕೊಟ್ಟಿದ್ದೇವೆ. ಮಹ್ಮದ್‌ಅಲಿ ಸಾಬ್ ಮತ್ತು ಹುಸೇನ್ ರೆಹಮಾನರವರು ಸ್ವಲ್ಪ ಹಣ ತುಂಬಿದ್ದಾರೆ, ಎಷ್ಟು ತುಂಬಿದ್ದಾರೆ ಎಂದು ನಿಖರವಾಗಿ ನೆನಪಿಲ್ಲ. ಅವರು ಎಷ್ಟು ಸಾಲ ಮರುಪಾವತಿ ಮಾಡಿದ್ದಾರೆ ಎಂಬುದನ್ನು ದೂರಿನಲ್ಲಿ ನಮೂದಿಸಿಲ್ಲ. ಆರಿಫ್ ರವರೂ ಸಹ ಎಷ್ಟು ಹಣ ತುಂಬಿದ್ದಾರೆ ಎಂಬ ಬಗ್ಗೆ ನಿಖರವಾಗಿ ನೆನಪಿಲ್ಲ. ಸಾಲ ತೆಗೆದುಕೊಂಡ ಮೊದಲನೇ ತಿಂಗಳಿನಿಂದಲೇ ಆರಿಫ್ ಸಾಬ್‌ರವರು ಸಾಲ ಬಾಕಿ ಉಳಿಸಿಕೊಂಡಿದ್ದರು. ಆರಿಫ್ ಸಾಬರವರು ಸಾಲ ಮರುಪಾವತಿ ಮಾಡದೇ ಸುಸ್ತಿದಾರರು ಆದಾಗ ಅವರ ವಿರುದ್ಧ ಪ್ರಕರಣ ದಾಖಲಿಸಲು ತೊಂದರೆ ಇರಲಿಲ್ಲ. ಮಹ್ಮದ್‌ಅಲಿ ಸಾಬ್ ಮತ್ತು ಹುಸೇನ್ ಅಬ್ದುಲ್ ರೆಹಮಾನರವರು ಸ್ವಲ್ಪ ಸ್ವಲ್ಪ ಹಣ ಕಟ್ಟಿದ್ದರಿಂದ ಅವರ ಮೇಲೆ 2022 ರವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಅವರಿಬ್ಬರೂ ಯಾವಾಗ

ಯಾವಾಗ ಎಷ್ಟು ಹಣ ತುಂಬಿದ್ದಾರೆ ಎಂಬ ಬಗ್ಗೆ ನೆನಪಿಲ್ಲ. ಸಾಲಗಾರಿಂದ ಸಾಲಕ್ಕೆ ಅರ್ಜಿ, ಬಾಂಡ್, ಹೈಪೋಥಿಕೇಶನ್ ಎಗ್ರಿಮೆಂಟ್ ಮತ್ತು ಪ್ರಾಮಿಸರಿ ಪತ್ರವನ್ನು ಪಡೆದುಕೊಂಡಿದ್ದೇವೆ. ಆರೋಪಿ ಮೀನು ಮಾರಾಟಕ್ಕಾಗಿ ಮತ್ತು ಉಳಿದ ಇಬ್ಬರು ತೆಂಗು ಮಾರಾಟಕ್ಕಾಗಿ ಸಾಲ ತೆಗೆದುಕೊಂಡಿರುತ್ತಾರೆ. ಆರೋಪಿ 2022 ರಲ್ಲಿ ನಾಲ್ಕೂ ಸಾಲದ ತೀರ್ವಳಿಗಾಗಿ ಚೆಕ್ ಕೊಟ್ಟಿರುತ್ತಾರೆ. ಆರೋಪಿ ಚೆಕ್ ಕೊಟ್ಟಿರುವ ಬಗ್ಗೆ ಆತನ ಸಾಲದ ಕಡತದಲ್ಲಿ ನಮೂದು ಮಾಡಲಾಗಿದೆ. ಆರೋಪಿಗೂ ಮತ್ತು ಉಳಿದ 3 ಸಾಲಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಸಾಲದ ಕಾಲಕ್ಕೆ ಭದ್ರತೆಗಾಗಿ ಒಂದು ಚೆಕ್ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಬಳಸಿಕೊಂಡು ಮರುಪಾವತಿಯಾಗ 3 ಸಾಲಗಳ ಮೊತ್ತವನ್ನು ಸೇರಿಸಿ ಆತ ಜಾಮೀನುದಾರರು ಎನ್ನುವ ಕಾರಣಕ್ಕೆ ಆತ ಭದ್ರತೆಗಾಗಿ ಕೊಟ್ಟಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ಸಾಲದ ಸ್ಟೇಟಮೆಂಟಗೂ ಹೇಳಿದ ಮೊತ್ತಕ್ಕೂ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಸಂಸ್ಥೆಗೆ ಚೆಕ್ ನಲ್ಲಿ ನಮೂದಿಸಿರುವ ಮೊತ್ತವನ್ನು ತುಂಬಲು ಬಾಧ್ಯಸ್ಥನಲ್ಲ



ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**